ಓ ಎಸ್ ನಂ. 207/2022
ಪಿ ಡಬ್ಲ್ಯು 1
ದಿನಾಂಕ 06/03/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 1(ಎ) ಪರಃ ಶ್ರೀ ಎಸ್ ಸಿ ಎನ್ ವಕೀಲರಿಂದಃ

ನನ್ನ ವಾದಪತ್ರದ ಎರಡನೇ ಖಂಡಿಕೆಯಲ್ಲಿ 1 ನೇ ಪ್ರತಿವಾದಿ ದಾವಾ ಸ್ವತ್ತನ್ನು ದಿನಾಂಕ 13/02/1995 ರಂದು ಖರೀದಿ ಮಾಡಿದ್ದರು ಎಂದು ಹೇಳಿದ್ದು, ಸದರಿ ಕ್ರಯಪತ್ರವನ್ನು ನಾನು ಪರಿಶೀಲಿಸಿರುತ್ತೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರವನ್ನು ಕೃಷ್ಣಪ್ಪರವರ ಕುಟುಂಬದವರಾದ ರಾಧಮ್ಮರವರು 1 ನೇ ಪ್ರತಿವಾದಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಆ ವಿಚಾರ ಗೊತ್ತು ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರದ ವ್ಯವಹಾರವು ಸಖರಾಯಪಟ್ಟಣ ಗ್ರಾಮದ ಹಳೆ ಸರ್ವೆ ನಂ.74/ಪಿ / ಹೊಸ ಸರ್ವೆ ನಂ.1351 ಕ್ಕೆ ಸಂಬಂದಪಟ್ಟಂತೆ ಆಗಿರುತ್ತದೆ ಎಂದರೆ ಸರಿ. ಸದರಿ ಕ್ರಯಪತ್ರವು ಕಡೂರು ಉಪನೊಂದಣಾಧಿಕಾರಿ ಕಚೇರಿಯಲ್ಲಿ ದಸ್ತಾವೇಜು ಸಂಖ್ಯೆ 3059/1994-95 ರಂತೆ ನೊಂದಣಿಯಾಗಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರದಲ್ಲಿ ಕಾಣಿಸಿರುವ ಚಕ್ಕುಬಂದಿಯಂತೆ ಪೂರ್ವಕ್ಕೆ ಕುರಿದೊಡ್ಡಿರಸ್ತೆ ಎಂದು ನಮೂದು

ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು 1ನೇ ಪ್ರತಿವಾದಿ ನನಗೆ ಕ್ರಯಪತ್ರ ಮಾಡಿಕೊಡುವ ಸಮಯದಲ್ಲಿ ಕಣ್ಣು ತಪ್ಪಿಸಿ ದಿಕ್ಕನ್ನು ಅದಲು ಬದಲು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಅದೇರೀತಿ 1ನೇ ಪ್ರತಿವಾದಿಯ ಹೆಸರಿಗೆ ಆಗಿರುವ ಕ್ರಯಪತ್ರದಲ್ಲಿ ಪಶ್ಚಿಮಕ್ಕೆ ಹಳ್ಳ ಎಂದು ನಮೂದಾಗಿರುತ್ತದೆ ಎಂದರೆ ಸರಿ. ದಕ್ಷಿಣಕ್ಕೆ ಈಶಣ್ಣರವರ ಜಮೀನು ಎಂತಲೂ ಸಹ ನಮೂದಾಗಿರುತ್ತದೆ ಎಂದರೆ ಸರಿ. ಉತ್ತರಕ್ಕೆ ಹನುಮಂತಪ್ಪರವರ ಜಮೀನು ಎಂದು ನಮುಾದಾಗಿರುತ್ತದೆ ಎಂದರೆ ಸರಿ. ನಾನು ವಾದಪತ್ರದಲ್ಲಿ ಷೆಡ್ಯೂಲ್ ಸ್ವತ್ತನ್ನು 74/ಪಿ ಎಂದು ಮಾತ್ರ ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅದೇರೀತಿ ನನ್ನ ವಾದಪತ್ರದಲ್ಲಿ ಪೂರ್ವಕ್ಕೆ ಈಶ್ವರಪ್ಪರವರ ಜಮೀನು, ಪಶ್ಚಿಮಕ್ಕೆ ಎಸ್ ಎನ್ ಹನುಮಂತಪ್ಪರವರ ಜಮೀನು, ಉತ್ತರಕ್ಕೆ ಕುರಿದೊಡ್ಡಿ ರಸ್ತೆ ಮತ್ತು ದಕ್ಷಿಣಕ್ಕೆ ಚಾನಲ್ ಮತ್ತು ಪದ್ಮನಾಭರವರ ಬೇಲಿ ಎಂದು ಬರೆಸಿರುತ್ತೇನೆ ಎಂದರೆ ಸರಿ. 1ನೇ ಪ್ರತಿವಾದಿ ಪುಟ್ಟಸ್ವಾಮಿರವರು ಅವರು ಜೀವಿತ ಕಾಲದಲ್ಲಿದಿನಾಂಕ 24/08/2016 ರಂದು 1994-95 ರಲ್ಲಿ ಅವರು ಖರೀದಿ ಮಾಡಿದ ಆಸ್ತಿಗೆ ಸಂಬಂದಪಟ್ಟಂತೆ ಅವರ ಮಗನಾದ 2ನೇ ಪ್ರತಿವಾದಿ ಜಗದೀಶರವರಿಗೆ ನೊಂದಾಯಿತ ದಾನಪತ್ರ ಮಾಡಿರುವ ವಿಚಾರ ನನಗೆ ಗೊತ್ತಿದೆಯಾ ಎಂದರೆ ಸಾಕ್ಷಿ ಸದರಿ ದಾನಪತ್ರ ಮಾಡಿರುವ ವಿಚಾರ ಗೊತ್ತಾದ ನಂತರವೇ ನಾನು ಈ

ದಾವೆ ಹೂಡಿದ್ದು ಎಂದು ನುಡಿಯುತ್ತಾರೆ. ಸದರಿ ದಾನಪತ್ರ ದಿನಾಂಕ 24/08/2016 ರಂದು ದಸ್ತಾವೇಜು ಸಂಖ್ಯೆ 3145/2016-17 ರಂತೆ ಕಡೂರು ಉಪನೊಂದಣಾಧಿಕಾರಿ ಕಚೇರಿಯಲ್ಲಿ ನೊಂದಣಿಯಾಗಿರುತ್ತದೆ ಎಂದರೆ ಸಾಕ್ಷಿ ಸದರಿ ದಾನಪತ್ರ ಆಗಿರುವ ವಿಚಾರ ನನಗೆ ಗೊತ್ತಿರಲಿಲ್ಲ, ನಾನು ಈ ದಾವೆ ಹೂಡುವ ಪೂರ್ವದಲ್ಲಿ ಪಹಣಿಯನ್ನು ಪರಿಶೀಲಿಸಿದ ಸಮಯದಲ್ಲಿ ಮೇಲ್ಕಂಡಂತೆ ದಾನಪತ್ರ ನೊಂದಣಿಯಾಗಿರುವ ವಿಚಾರ ನನಗೆ ತಿಳಿದು ಬಂದಿರುತ್ತದೆ ಎಂದು ನುಡಿಯುತ್ತಾರೆ. ನಾನು ಪ್ರಸ್ತುತ ದಾವೆಯನ್ನು ಹೂಡುವ ಕಾಲಕ್ಕೆ 1 ನೇ ಪ್ರತಿವಾದಿ ಪುಟ್ಟಸ್ವಾಮಿರವರು ಮರಣ ಹೊಂದಿದ್ದರು ಎಂದರೆ ಸಾಕ್ಷಿ ದಾವೆ ಹುಾಡುವ ಕಾಲಕ್ಕೆ ನನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ಮೃತ ಪುಟ್ಟಸ್ವಾಮಿರವರು ಅವರ ಮಗ 2 ನೇ ಪ್ರತಿವಾದಿ ಹೆಸರಿಗೆ ದಾನಪತ್ರ ಮಾಡಿರುವ ವಿಚಾರ ನನಗೆ ಯಾವಾಗ ನಿಖರವಾಗಿ ಗೊತ್ತಾಯಿತು ಎಂದರೆ ಸಾಕ್ಷಿ 2022 ರಲ್ಲಿ ಎಂದು ನುಡಿಯುತ್ತಾರೆ. ಸದರಿ ದಾನಪತ್ರ ನನಗೆ ಬಂಧನಕಾರಿಯಾಗುವುದಿಲ್ಲ ಎಂದು ನಾನು ಇದುವರೆಗೂ ಸಹ ಯಾವುದೇ ಪರಿಹಾರವನ್ನು ಕೋರಿರುವುದಿಲ್ಲ ಎಂದರೆ ಸಾಕ್ಷಿ ನನ್ನ ಆಸ್ತಿಯನ್ನು ನನಗೆ ಕೊಡಬೇಕೆಂದು ಕೇಳಿರುತ್ತೇನೆ ಎಂದು ನುಡಿಯುತ್ತಾರೆ.

ದಿನಾಂಕ 14/05/1997 ರಂದು ಕ್ರಯಪತ್ರವಾಗುವ ಕಾಲಕ್ಕೆ ಸಾಕ್ಷಿದಾರರು ಯಾರೆಲ್ಲಾ ಇದ್ದರು ಎಂದರೆ ಸಾಕ್ಷಿ ಬಹಳ ವರ್ಷವಾಗಿರುವುದರಿಂದ ನನಗೆ ಈಗ ನೆನಪಿಲ್ಲ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿ ಜಗದೀಶ್ ರವರು ದಾವಾ ಆಸ್ತಿಯ ಮಾಲೀಕರು ಎಂದು ಅವರ ಹೆಸರಿನಲ್ಲಿರುವ ನಿಪಿ-2 ರ ಪಹಣಿಯನ್ನು ಹಾಜರುಪಡಿಸಿದ್ದೇನೆ ಎಂದರೆ ಸಾಕ್ಷಿ ದಾಖಲೆಯನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನಿಪಿ-2 ರ ಪಹಣಿಯ ಕಲಂ 12 ಎ ರಲ್ಲಿ 2021-22 ನೇ ಸಾಲಿನಲ್ಲಿ 2 ನೇ ಪ್ರತಿವಾದಿಯೇ ವ್ಯವಸಾಯಗಾರರು ಎಂದು ಮತ್ತು ಅವರ ವಿಳಾಸ ಸಹ ನಮೂದಾಗಿರುತ್ತದೆ ಎಂದರೆ ಸಾಕ್ಷಿ ಸರಿಯಲ್ಲ ಎಂದು ನುಡಿಯುತ್ತಾರೆ. ಸದರಿ ಪಹಣಿಯ ಕಲಂ 9 ರಲ್ಲಿ ಬೆಳೆ ಅಡಿಕೆ ಎಂದು ನಮೂದು ಇರುತ್ತದೆ ಎಂದರೆ ಸಾಕ್ಷಿ ಅದು ಸುಳ್ಳು ಅಲ್ಲಿ ಅಡಿಕೆ ಇರುವುದಿಲ್ಲ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಯ ಮಾಲೀಕತ್ವದ ಜಮೀನಿನಲ್ಲಿ ಅಡಿಕೆ ತೋಟ ಇದ್ದರೂ ಸಹ ನಾನು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-3 ರ ದಾಖಲೆಯು ಹಳೆ ಸರ್ವೆ ನಂ.74/3 ಕ್ಕೆ ಸಂಬಂದಪಟ್ಟದ್ದಾಗಿರುತ್ತದೆ ಎಂದರೆ ಸಾಕ್ಷಿ ದಾಖಲೆ ಪರಿಶೀಲಿಸಿ ನಾನು ಸರ್ವೆ ನಂ.74 ರಲ್ಲಿ 3 ಎಂದು ನಮೂದಾಗಿರುವ ವಿಚಾರವನ್ನು ನಾನು ಗಮನಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಪಹಣಿಯ ಕಲಂ ನಂ.9 ರಲ್ಲಿ

ರಾಥಮ್ಮರವರಿಂದ ಪುಟ್ಟಸ್ವಾಮಿರವರು ಖರೀದಿ ಮಾಡಿರುವುದು ಎಂದು ನಮೂದು ಇದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಪಿ-4 ರ ದಾಖಲೆಯು 2000-01 ರಲ್ಲಿ ಮೃತ ಪುಟ್ಟಸ್ವಾಮಿರವರ ಹೆಸರಿನಲ್ಲಿ ಇದ್ದ ಪಹಣಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಪಿ-5 ರ ದಾಖಲೆಯಲ್ಲಿ ಹಳೆ ಸರ್ವೆ ನಂ.74/3 ಪಿ ಎಂದು ನಮೂದು ಇದೆ ಎಂದರೆ ಸಾಕ್ಷಿ ನನಗೆ ಸರ್ವೆ ನಂ.74/ಪಿ ಮಾತ್ರ ಗೊತ್ತು, 3 ರ ಬಗ್ಗೆ ಗಮನಕ್ಕೆ ಇಲ್ಲ ಎಂದು ನುಡಿಯುತ್ತಾರೆ. ನಿಪಿ-6 ರ ಋಣಭಾರ ಪತ್ರವು ಸರ್ವೆ ನಂ.74/ಪಿಗೆ ಮಾತ್ರ ಸಂಬಂದಪಟ್ಟಿದ್ದು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಾನು ಆಸ್ತಿಯನ್ನು ಖರೀದಿ ಮಾಡುವ ಕಾಲಕ್ಕೆ ಸರ್ವೆ ನಂ.74/ಪಿ, ಸರ್ವೆ ನಂ.1351 ಎಂದು ಹೊಸ ನಂಬರಾಗಿ ಬದಲಾವಣೆಯಾಗಿತ್ತು ಎಂದರೆ ಸರಿ. 1997 ರಲ್ಲಿ ಸರ್ವೆ ನಂ.74/ಪಿಗೆ ಸಂಬಂದಪಟ್ಟಂತೆ ಪಹಣಿಯು ಹೊಸ ಸರ್ವೆ ನಂ.1351 ರಂತೆ ಚಾಲ್ತಿಯಲ್ಲಿತ್ತು ಎಂದರೆ ಸರಿ. ಸರ್ವೆ ನಂ.1351 ಕ್ಕೆ ಸಂಬಂದಪಟ್ಟಂತೆ ವ್ಯವಹಾರವಾದ ಬಾಬ್ತು ನಾನು ಯಾವುದೇ ಋಣಭಾಗ ಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ಪುಟ್ಟಸ್ವಾಮಿರವರು ಅವರ ಜೀವಿತ ಕಾಲದಲ್ಲಿ ನನಗಾಗಲಿ 1 ನೇ ವಾದಿ ಶಾಂತಿರವರಿಗಾಲಿ ಅವರು ಖರೀದಿಸಿದ ಆಸ್ತಿಯನ್ನು ಮಾರಾಟ

ಮಾಡಿಲ್ಲ ಎಂದರೆ ಸಾಕ್ಷಿ ಜಮೀನನ್ನು ಅವರು ನನಗೆ ಮತ್ತು 1 ನೇ ವಾದಿಗೆ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಒಂದುವೇಳೆ ಮೃತ ಪುಟ್ಟಸ್ವಾಮಿರವರು ನಮಗೆ ಸ್ವತ್ತನ್ನು ಮಾರಾಟ ಮಾಡಿದ್ದೇ ಆಗಿದ್ದರೇ ನಾವು ಸದರಿ ಪುಟ್ಟಸ್ವಾಮಿರವರ ಹೆಂಡತಿ ಮತ್ತು ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿ ಕ್ರಯಪತ್ರವನ್ನು ನೊಂದಣಿ ಮಾಡಿಸುತ್ತಿದ್ದೇವು ಎಂದರೆ ಸಾಕ್ಷಿ ಸದರಿ ಸ್ವತ್ತು ಪುಟ್ಟಸ್ವಾಮಿರವರ ಸ್ವಯಾರ್ಜಿತ ಆಸ್ತಿಯಾಗಿರುವುದರಿಂದ ಅವರು ಒಬ್ಬರೇ ಕ್ರಯಪತ್ರ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಮೃತ ಪುಟ್ಟಸ್ವಾಮಿರವರು ನನಗೆ ಬರೆದುಕೊಟ್ಟಿರುವಂತಹ ಕ್ರಯಪತ್ರದ ಮೂಲದಾಖಲೆಯನ್ನು ಹಾಜರುಪಡಿಸಿರುತ್ತೇನಾ ಎಂದರೆ ಸಾಕ್ಷಿ ಮನೆಯಲ್ಲಿ ಕಳೆದುಹೋಗಿರುತ್ತದೆ, ನಾನು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ಒಂದುವೇಳೆ ಮೃತ ಪುಟ್ಟಸ್ವಾಮಿರವರು ನನಗೆ ಸ್ವತ್ತನ್ನು ಮಾರಾಟ ಮಾಡಿದ್ದರೆ ಪಹಣಿಯ ವ್ಯವಸಾಯಗಾರರ ಕಲಂನಲ್ಲಿ ನನ್ನ ಮತ್ತು 1 ನೇ ವಾದಿಯ ಹೆಸರು ನಮೂದಾಗುತ್ತಿತ್ತು ಎಂದರೆ ಸಾಕ್ಷಿ ಕ್ರಯಪತ್ರದಂತೆ ಖಾತೆ ಬದಲಾವಣೆಯಾಗಿಲ್ಲ ಎಂದು ನುಡಿಯುತ್ತಾರೆ. ಮೃತ ಪುಟ್ಟಸ್ವಾಮಿರವರು ಅವರಿಗೆ ಸೇರಿದ ಆಸ್ತಿಯನ್ನು ಎಂದಿಗೂ ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-1 ರ ಕ್ರಯಪತ್ರವು ಮೃತ ಪುಟ್ಟಸ್ವಾಮಿರವರ ಹೆಸರಿನಲ್ಲಿ ಸೃಷ್ಟಿಸಿಕೊಂಡಿರುವ ನಕಲಿ

ದಾಖಲೆ ಎಂದರೆ ಸರಿಯಲ್ಲ. ಮೃತ ಪುಟ್ಟಸ್ವಾಮಿರವರು ಆ ದಿನಗಳಲ್ಲಿ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಸ್ವಸ್ಥರಾಗಿದ್ದು ಅವರಿಗೆ ಆಸ್ತಿಯನ್ನು ಮಾರಾಟ ಮಾಡುವ ಯಾವುದೇ ಪ್ರಮೇಯ ಇರಲಿಲ್ಲ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ನಿಪಿ-6 ರ ಋಣಭಾರ ಪತ್ರ ಮೃತ ಪುಟ್ಟಸ್ವಾಮಿರವರಿಗೆ ಸಂಬಂದಪಟ್ಟ ಸರ್ವೆ ನಂ.74/3 ಪಿ ರ ಆಸ್ತಿಗೆ ಸಂಬಂದಪಟ್ಟಿದ್ದಲ್ಲ ಎಂದರೆ ಸರಿಯಲ್ಲ. ಮೃತ ಪುಟ್ಟಸ್ವಾಮಿರವರು 1994-95 ರಲ್ಲಿ ರಾಧಮ್ಮರವರಿಂದ ಖರೀದಿ ಮಾಡಿರುವ ಚಕ್ಕುಬಂದಿಯೇ ಬೇರೆ ಹಾಗೂ ನಿಪಿ-1 ರ ಕ್ರಯಪತ್ರದಲ್ಲಿ ಖರೀದಿ ಮಾಡಿರುವ ಆಸ್ತಿಯೇ ಬೇರೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಸೇರಿದ ಆಸ್ತಿಯನ್ನು ಲಪಟಾಯಿಸುವ ಸಲುವಾಗಿ ಸುಳ್ಳು ದಾಖಲೆ ಸೃಷ್ಟಿಸಿ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಮೃತ ಪುಟ್ಟಸ್ವಾಮಿ ಕಡೆಯಿಂದ ನಾನು ಸ್ವತ್ತನ್ನು ಖರೀದಿಸಿದ್ದರೆ ಸಂದಂಬಪಟ್ಟ ಕಚೇರಿಯಲ್ಲಿ ಖಾತೆ ಬದಲಾವಣೆ ಮಾಡಲು ಅರ್ಜಿ ಸಲ್ಲಿಸುತ್ತಿದ್ದೆ ಎಂದರೆ ಸಾಕ್ಷಿ ನಾನು ಖಾತೆ ಬದಲಾವಣೆ ಮಾಡಲು ಓಡಾಡಿರುತ್ತೇನೆ ಎಂದು ನುಡಿಯುತ್ತಾರೆ. ಅದರ ಬಾಬ್ತು ನಾನು ಒಂದೇ ಒಂದು ದಾಖಲೆಯನ್ನು ಸಹ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನಾನು ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಪುಟ್ಟಸ್ವಾಮಿರವರ ಕುಟುಂಬದ ಆಸ್ತಿಯ ಮೇಲೆ ನನಗೆ ಯಾವುದೇ

ಹಕ್ಕು ಹಿತಾಸಕ್ತಿ ಅಧಿಕಾರ ಮತ್ತು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ನಾನು ಇದುವರೆಗೂ ಸಹ ಪುಟ್ಟಸ್ವಾಮಿರವರು ಖರೀದಿ ಮಾಡಿರುವ ಆಸ್ತಿಯಲ್ಲಿ ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ಸ್ವಾಧೀನದಲ್ಲಿ ಇರುವ ಬಗ್ಗೆ ಯಾವುದಾದರೂ ದಾಖಲಾತಿ ಹಾಜರುಪಡಿಸಿದ್ದೇನಾ ಎಂದರೆ ಸಾಕ್ಷಿ ಇಲ್ಲ ಆದರೆ ನಾನು ಕೂಲಿ ಆಳುಗಳನ್ನು ಕರೆದುಕೊಂಡು ಜಮೀನಿನ ಕೆಲಸ ಮಾಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಮೃತ ಪುಟ್ಟಸ್ವಾಮಿರವರು ಖರೀದಿಸಿದ ಆಸ್ತಿಯನ್ನು 2 ನೇ ಪ್ರತಿವಾದಿಗೆ ದಾನಪತ್ರ ಮಾಡಿ 2 ನೇ ಪ್ರತಿವಾದಿ ಆ ಸ್ವತ್ತಿನಲ್ಲಿ ಅಡಿಕೆ ಮತ್ತು ತೆಂಗು ಬೆಳೆದು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಯಾವುದೇ ವಿಚಾರಗಳು ಗೊತ್ತಿಲ್ಲದೆ ಇದ್ದರೂ ಸಹ ಪ್ರತಿವಾದಿಗಳ ಆಸ್ತಿಯನ್ನು ಕಬಳಿಸುವ ಸಲುವಾಗಿ ಸುಳ್ಳು ದಾಖಲೆ ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 2 ನೇ ಪ್ರತಿವಾದಿ ಪರಃ ಶ್ರೀ ಕೆ ಆರ್ ವಕೀಲರಿಂದಃ</u>

ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.